MYSORE LEGISLATIVE ASSEMBLY.

THIRTY-FIFTH DAY.

Wednesday, 6th April 1955.

The House met in the Assembly Hall, at Twelve Noon.

MR. SPEAKER (SRI H. S. RUDRAPPA, B.Sc., LL.B.) in the Chair.

QUESTIONS AND ANSWERS

Temples and forts transferred to the Centre.

Q.—109. **Srimathi B. L. SUBBAMMA** (Chikmagalur—Mudigere).—

Will the Government be pleased to state :—

(*a*) the number of renowned ancient temples and forts in the State that have been transferred to the Central Government ;

(*b*) the steps taken by them to protect the temples and forts which have not been transferred to the Central Government (details to be furnished) ?

A.—**Sri A. G. RAMACHANDRA RAO** (Minister for Law and Education).—

(*a*) 108 ancient monuments (including temples, forts and sites).

(*b*) The State Department of Public Works, Muzrai and Archæology look after the monuments that are still under the control of the State.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ 108 ಸ್ಮಾರಕಗಳಲ್ಲಿ ಮುಖ್ಯವಾದುವು ಯಾವುವು ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ 108 ಸ್ಮಾರಕಗಳೂ ಮುಖ್ಯವಾದುವೆಂದು ಪರಿಗಣಿಸಿ ಕೇಂದ್ರ ಸರ್ಕಾರದವರು ಅವನ್ನು ತೆಗೆದುಕೊಂಡಿದ್ದಾರೆ.

ಶ್ರೀಮತಿ ಬಿ ಎಲ್. ಸುಬ್ಬಮ್ಮ.—ಇಂಡಿಯಾ ಸರ್ಕಾರದವರು ತೆಗೆದುಕೊಂಡಿರುವ ಈ ಸ್ಮಾರಕಗಳನ್ನು ಈಗ ಉತ್ತಮ ಸ್ಥಿತಿಗೆ ತಂದಿದ್ದಾರೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ಕಡೆ ಪ್ರಯತ್ನಮಾಡುತ್ತಿದ್ದಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಬೇಲೂರು ದೇವಸ್ಥಾನ ಉತ್ತಮ ಸ್ಥಿತಿಗೆ ಬಂದಿಲ್ಲವೆಂದು ಹೇಳಿದರೆ ನಿಮಗಾ ತಗೆದುಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಹುಶಃ ಇದುವರೆಗೆ ಯಾವುದೇ ದೇವಸ್ಥಾನಕ್ಕೆ ಹೆಚ್ಚು ಗಮನಕೊಟ್ಟಿದ್ದಾರೆಂದರೆ ಅದು ಬೇಲೂರು ದೇವಸ್ಥಾನ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮೊನ್ನೆ ನೋಡಿದಾಗ ಕೂಡ ಆ ದೇವಸ್ಥಾನ ಬಹಳ ಹೀನ ಸ್ಥಿತಿಯಲ್ಲಿತ್ತೆಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಗೊತ್ತಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ದೇವನೂರು ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ ಬಿದ್ದುಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಅದನ್ನು ರಿಪೇರಿ ಮಾಡಿಸಲು ಪ್ರಯತ್ನಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಮಾಡುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸೋಮನಾಥಪುರದ ದೇವಾಲಯವೂ ಇದರಲ್ಲಿ ಸೇರಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸೇರಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅಲ್ಲಿ ಕಾರ್ಮಿಕ ವರ್ಷಿಪ್ಪಿಗೆ ಅವಕಾಶಕೊಡಬೇಕೆಂದು ಮನವಿ ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆರ್ಕಿಯಾಲಾಜಿಕಲ್ ಇಲಾಖೆಯವರು ಈ ದೇವಸ್ಥಾನದ ವಿಚಾರದಲ್ಲಿ ಪ್ರಪೋಸಲ್ ಕಳುಹಿಸಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸೋಮನಾಥಪುರದ ದೇವಾಲಯಕ್ಕೆ ದೀಪ ಮಂಜೂರುಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅಲ್ಲಿ ಕಾರ್ಮಿಕ ವರ್ಷಿಪ್ಪಿಗೆ ಅವಕಾಶಕೊಡಬೇಕೆಂದು ರೂಬು ರೂಬು ಮನವಿ ಮಾಡಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದರ ಮೇಲೆ ಏನು ಕಾರ್ಯಕ್ರಮ ಕೈಕೊಳ್ಳಲಾಗಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆರ್ಕಿಯಾಲಾಜಿಕಲ್ ಇಲಾಖೆಗೆ ಪೂಜೆ ಮಾಡುವುದು ಸೇರಿಲ್ಲ. ಮನವಿಮಾಡಿದವರು ಪುನಃ ನನ್ನ ಬಳಿಗೆ ಬಂದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸೋಮನಾಥಪುರದಿಂದ ದೇವರನ್ನು ಹೊಳೇನರಸೀಪುರಕ್ಕೆ ತೆಗೆದುಕೊಂಡು ಹೋಗಿರುವುದು ಅವಗಾಹನೆಗೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾರೋ ಹೇಳಿದರು. ಸರಿಯಾಗಿ ಗೊತ್ತಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗಲಾದರೂ ದೇವರನ್ನು ಸರಿಯಾದಕಡೆ ಪ್ರತಿಷ್ಠಾಪನೆಮಾಡಿ ಕಾರ್ಮಿಕ ವರ್ಷಿಪ್ಪಿಗೆ ಅವಕಾಶಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮುಜರಾಯಿ ಮಂತ್ರಿಗಳಿಗೆ ತಿಳಿಸುತ್ತೇನೆ.

Sri M. LINGANNA.—May I know who is the officer who is looking after these 108 institutions on behalf of the Government of India ?

Sri A. G. RAMACHANDRA RAO.—The Government of India Director and the Regional Directors are looking after these institutions.

Sri M. LINGANNA.—May I know whether the Government of Mysore has any relationship with these officers ?

Sri A. G. RAMACHANDRA RAO.—No. They work under the Union Government.

Sri M. LINGANNA.—Cannot the Government of Mysore recommend repairs and other things concerning these Institutions to the Government of India officers ?

Sri A. G. RAMACHANDRA RAO.—We can draw their attention if there is necessity.

Sri M. LINGANNA.—May I know whether the Government is aware that all these officers have recommended that certain of these 108 institutions may be handed back to the Mysore Government?

Sri A. G. RAMACHANDRA RAO.—So far, I have not received any communication.

Sri M. LINGANNA.—Whether the Government will draw the attention of the Government of India to the restoration of the Sreerangapatna Kandaka which is neglected ?

Sri A. G. RAMACHANDRA RAO.—I do not think it comes under this.

Sri H. C. LINGA REDDY.—Is the Government incurring any expenditure for the protection and maintenance of these institutions Sir ?

Sri A. G. RAMACHANDRA RAO.—Yes.

Sri H. C. LINGA REDDY.—What is the amount Sir ?

Sri A. G. RAMACHANDRA RAO.—I want notice.

Sri R. ANANTARAMAN.—Who will bear the expenditure in renovating these temples, is it the Centre or the State, Sir ?

Sri A. G. RAMACHANDRA RAO.—If its management is transferred to the Union Government, it is the Union Government Department. In other cases, it is the Muzrai Department or the Local Authorities as the case may be, because there are different categories of temples.

Sri R. ANANTARAMAN.—May I know whether the Centre have rennovated temples that have been transferred to the Central Government, this year ?

Sri A. G. RAMACHANDRA RAO.—We have to ascertain and inform you.

Sri P. R. RAMAIYA.—Sir, is the Government aware that the Archæological Department was engaged in the work of publication of the inscriptions on rocks ?

Sri A. G. RAMACHANDRA RAO.—Yes.

Sri P. R. RAMAIYA.—Have any inscriptions been published recently ?

Sri A. G. RAMACHANDRA RAO.—No, the Department itself is under reorganisation now.

Sri P. R. RAMAIYA.—Sir, have any reports about the work of the Archæological Department locally been published Sir ?

Sri A. G. RAMACHANDRA RAO.— I believe some have been published Sir.

Sri P. R. RAMAIYA.—Sir has it come to the notice of the Government that after the transfer of some of these institutions to the Central Government, work has been neglected specially in Halebid and such places ?

Sri A. G. RAMACHANDRA RAO.—It has not come to the notice of the Government.

Sri P. R. RAMAIYA.—Sir, will the Government kindly write to the Central Covernment and say that the work that was being done at Halebid will be taken up again ?

Sri A. G. RAMACHANDRA RAO.— I will examine that position, Sir.

Sri R. MUNISWAMIAH.—Has it not come to the notice of the Government that the fort at Devanahalli is dilapidated ?

Mr. SPEAKER.—Why did you not send a particular question relating to that ? There are 300 to 400 institutions ; how can the Hon'ble Minister remember everything ?

Sri R. MUNISWAMIAH.—I have used this occasion just to bring to the notice of the Government that this fort may be taken care of.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮುಜರಾಯಿ ಇಲಾಖೆಗೆ ಸೇರಿದ ಮೂಡಿಗೆರೆ ತಾಲ್ಲೂಕು ದೇವಸ್ಥಾನಗಳ ರಿಪೇರಿ ಕೆಲಸ ಕೈಗೊಂಡಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಈ ಪ್ರಶ್ನೆಯಿಂದ ಉದ್ಭವಿಸುವುದಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಹಳ್ಳಿಗಳ ಕಡೆ ಕೇಂದ್ರ ಸರ್ಕಾರಕ್ಕೆ ವಹಿಸದಿರುವ ದೇವಸ್ಥಾನಗಳ ರಿಪೇರಿಗಾಗಿ ಒದಗಿಸಿರುವ ಹಣ ಬಹಳ ಕಡಮೆಯಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯಕ್ಕೆ ಸಂಬಂಧಪಟ್ಟ ವಿಷಯ.

ಶ್ರೀ ಡಿ. ಆರ್. ಕರಿಗೌಡ.—ನಾವು ಅರ್ಧ ಹಣ ಕೊಟ್ಟರೆ ಸರ್ಕಾರದವರು ಅರ್ಧ ಹಣ ಹಾಕುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಾದ ಕಡೆ ಕೊಟ್ಟಿದೆ. ಎಲ್ಲಿ ಅವಶ್ಯಕವಿದೆಯೆಂದು ಹೇಳಿದರೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ಮೈಸೂರು ದೇಶದಲ್ಲಿ ದೇವಸ್ಥಾನಗಳಿಗಾಗಿ ಕೇವಲ 20-30 ಸಾವಿರ ರೂಪಾಯಿಗಳನ್ನೊದಗಿಸುತ್ತಿರುವುದು ಬಹಳ ಕಡಮೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದೊಂದು ಡಿಸ್ಟ್ರಿಕ್ಟಿಗೆ 10-12 ಸಾವಿರ ರೂಪಾಯಿಗಳನ್ನು ರಿಪೇರಿಗಾಗಿ ಹಂಚುತ್ತಿದೆ.

ಶ್ರೀ ಡಿ. ಆರ್. ಕರಿಗೌಡ.—ಹಳ್ಳಿಯವರು ಅರ್ಧ ಕೊಟ್ಟರೆ ಸರ್ಕಾರ ಅರ್ಧ ಹಣ ಕೊಡಲು ಯೋಚನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಖಾಯಮಾಗಿ ತಾವು ಹೇಳುವ ನೀತಿಯನ್ನನುಸರಿಸುವುದಕ್ಕಾಗುವುದಿಲ್ಲ. ಸಂದರ್ಭಾನುಸಾರ ಅವಲಂಬಿಸುತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ಹಾಗಾದರೆ ಹತ್ತು ಸಾವಿರ ರೂಪಾಯಿ ಬೇಕಾಗಿರುವ ಕಡೆಗೆ ಒಂದು ಸಾವಿರ ರೂಪಾಯಿ ಕೊಟ್ಟರೆ ಸಾಕೆ ?

ಶ್ರೀ ಕಡಿದಾಳ್ ಮಂಜಪ್ಪ.—ಏನು ಮಾಡುವುದು ? ಪ್ರತಿಯೊಂದು ಹಳ್ಳಿಯಲ್ಲೂ 2—3 ದೇವಸ್ಥಾನಗಳಿವೆ. ಸರ್ಕಾರವೇ ಮಾಡುವುದು ಕಷ್ಟ. ಭಕ್ತರೂ ಸಹಾಯ ಮಾಡಬೇಕು.

ಶ್ರೀ ಡಿ. ಆರ್. ಕರಿಗೌಡ.—ಹಳ್ಳಿಗರು ಅರ್ಧಭಾಗ ಕೊಟ್ಟರೆ ನೀವು ಇನ್ನರ್ಧ ಕೊಡಲು ಕಷ್ಟವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಸಂದರ್ಭಗಳಲ್ಲೂ ಆ ರೀತಿ ನೀತಿಯನ್ನು ಅನುಸರಿಸುವುದಕ್ಕಾಗುವುದಿಲ್ಲ.

ಶ್ರೀ ಜಿ. ಶಿವಪ್ಪ.—ಚಿರಿತ್ರಾರ್ಹವಾಗಿರತಕ್ಕ ಚಿತ್ರದುರ್ಗದ ಏಳು ಸುತ್ತಿನ ಕೋಟೆ ರಿಪೇರಿಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಚೆನ್ನಾಗಿ ಪ್ರಿಸರ್ವ್ ಆಗಿದೆ.

ಶ್ರೀ ಎಸ್. ಗೋಪಾಲಗೌಡ.—ಕಾಲೇದುರ್ಗ, ಇಕ್ಕೇರಿ, ಕೆಳದಿ—ಈ ಜಾಗಗಳಲ್ಲಿ ಕೋಟೆ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ನೋಡಿದ್ದಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಡಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅವು ಬಹಳ ಹೀನ ಸ್ಥಿತಿಯಲ್ಲಿಲ್ಲವೆ? ಕಾಡು ಬೆಳೆದುಕೊಂಡು ಮನುಷ್ಯರು ಹೋಗುವುದಕ್ಕೆ ಕಷ್ಟವಾಗಿದೆ. ಅದನ್ನು ಸರ್ಕಾರದವರು ಪರಿಶೀಲನೆಮಾಡಿ ಅವುಗಳಿಗೆ ಸರಿಯಾದ ರಸ್ತೆಗಳನ್ನು ಮಾಡಿಸುವುದಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಮಾಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಗೋಮಟೇಶ್ವರ ಪ್ರತಿಮೆಗೆ ಮೈಮೇಲೆ ತುರಿಬಂದು ಆ ಶಿಲೆ ನಶಿಸಿ ಹೋಗುತ್ತಾ ಇರುವ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ಒಂದು ಕಮಿಟಿ ನೇಮಕವಾಗಿತ್ತು. ಅವರು ಅದರ ವಿಷಯದಲ್ಲಿ ಪರಿಶೀಲನೆಮಾಡಿರುತ್ತಾರೆ. ಈಚೆಗೆ ಯಾವ ವರದಿಯೂ ಬಂದಿಲ್ಲ.

Teachers Officials and Officers of the Education Department.

Q.—345. **Sri D. R. KARI GOWDA** (Hassan).—

Will the Government be pleased to state :—

(*a*) what would be the extra cost involved if the new scales of pay contemplated in respect of teachers, officials and officers of the Education Department are to be given effect to ;

(*b*) the steps that have been taken by them to meet this extra cost ?

A.—**Sri A. G. RAMACHANDRA RAO** (Minister for Law and Education).—

(*a*) The extra cost of introducing the scales of pay recommended by the Educational Reforms Committee has been worked out on a preliminary calculation at Rs. 10,35,895 per annum recurring.

(*b*) The question is under consideration.

ಶ್ರೀ ಡಿ. ಆರ್. ಕರಿಗೌಡ.—ಈ ವಿದ್ಯಾನುಧಾರಣೆ ಪ್ರಕಾರ ಪ್ರೈಮರಿ ಸ್ಕೂಲು ಮೇಸ್ತ್ರುಗಳಿಗೆ ಯಾವ ಗ್ರೇಡು ಕೊಡಬೇಕೆಂದು ಹೇಳಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರುಗಳಿಗೆಲ್ಲಾ 40 ರೂಪಾಯಿನಿಂದ ಪ್ರಾರಂಭ ಮಾಡಬೇಕಾಗುತ್ತದೆ. ಅವರೆಲ್ಲಾ S. S. L. C. Candidates ಆಗಿರಬೇಕೆಂದು ಹೇಳಿದೆ.

ಶ್ರೀ ಡಿ. ಆರ್. ಕರಿಗೌಡ.—ಮಿಡ್ಲ್ ಸ್ಕೂಲು ಮೇಸ್ತ್ರುಗಳಿಗೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಜ್ಞಾಪಕ ಇಲ್ಲ.

ಶ್ರೀ ಡಿ. ಆರ್. ಕರಿಗೌಡ.—ಬರೀ ಪ್ರೈಮರೀ ಸ್ಕೂಲು ಮೇಸ್ತ್ರುಗಳಿಗೆ ಈ ರೀತಿ 40 ರೂಪಾಯಿನಂತೆ ಕೊಟ್ಟರೆ ಎಷ್ಟು ಹೆಚ್ಚಿಗೆ ಖರ್ಚಾಗುತ್ತದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶಿಷ್ಟದಲ್ಲಿ ಅದನ್ನು ಕೊಟ್ಟಿದೆ. ಜ್ಞಾಪಕದಿಂದ ಹೇಳುವುದು ಕಷ್ಟ.

ಶ್ರೀ ಡಿ. ಆರ್. ಕರಿಗೌಡ.—ಪ್ರೈಮರಿ, ಮಿಡ್ಲ್, ಹೈಸ್ಕೂಲು ವಿದ್ಯಾಭ್ಯಾಸ ಬದಲಾವಣೆ ಮಾಡಿದರೆ 10,35,895 ರೂಪಾಯಿ ಆಗುತ್ತದೆಂದು ಹೇಳಿದ್ದೀರಿ. ಸಂಸ್ಕೃತಿ ಪ್ರಚಾರ, ಅಡಲ್ಟ್ ಎಜ್ಯುಕೇಷನ್ ಮುಂತಾದುವುಗಳಿಗೆ ಕೊಡುತ್ತಾ ಇರತಕ್ಕ ಹಣವನ್ನು ಕೂಡ ಇದಕ್ಕೆ ಖರ್ಚುಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗ ಆ ಕೆಲಸ ಎಲ್ಲಾ ಮೂಲೆಗೆ ಬೀಳುತ್ತದೆ.